12. Noon

MATTERS UNDER RULE 312

(i) Shifting of villages under Hemavathy Command

SRI B.B. CHIMMANKATTI (Minister of State for Major and Medium Irrigation).—Sri, I wish to make the following statement :

The proposal is to shift ten villages in Holenarasipura taluk, four villages in Channarayapatna taluk, coming under the Hemavathy Left Bank Canal command and six villages in Holenarasipur taluk and three villages in Arkalgud taluk coming under Hemavathy Right Bank canal command. On an earlier occasion, Sri Devegowda, had represented to the Government for shifting of sixteen villages in Holenarasipur and Arkalgud taluks situated in the command of the Hemavathy project in view of marshiness developed in the villages and spread of Malaria. During the 42nd meeting of the Rehababilitation Committee for Hemavathy project, held on 12th Agust 1981, a resolution has been passed to the effect that the fifteen villages which are waterlogged and situated in the command of Hemavathy project, have to be shifted to higher elevation.

The Chief Engineer, after inspection, has recommended shifting of the seven villages out of fifteen villages recommended by Rehabilitation Committee. While examining at Government level, it has been found necessary to ascertain whether the ill-effects and dampness is due to excessive use of water on account of irrigation and whether this effect could be avoided by providing proper drainage arrangements alround the villages, as the cropping pattern under the Hemavathy project provides only for single crop viz., kharif paddy under the right bank canal and semi-dry crops under the other canals. By adhering to this cropping pattern, it is very unlikely that waterlogging will happen in the villages. However, the matter will be examined in all cases by joint spot inspections by the Health Department authorities, the Chief Engineer and Agriculture Department and inconsultion with the Rehabilitation Committee of Hemavathy Project.

ಸ್ವಾಮಿ, ನಾನು ಇದರ ಬಗ್ಗೆ ಒಂದು ಪ್ರಶ್ನೆಯನ್ನು ಕಳುಹಿಸಿ ಸುಮಾರು ೫-೬ ತಿಂಗಳಗಳು ಆಯಿತು. ಆದರೆ ಇದುವರೆವಿಗೂ ಸರ್ಕಾರದಿಂದ ಉತ್ತರ ಬರಲಿಲ್ಲ. ಮತ್ತೆ ಈಗ ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾದಂತಹ ಪ್ರಸಂಗ ಒದಗಿ ಬಂದಿದೆ. ಈ ಡ್ಯಾಮ್ ಸುಮಾರು ೧೦ ಮೈಲಿ ದೂರ ಇದೆ. ಈ ಡ್ಯಾಮ್‌ಗೆ ರಿವರ್ ಚಾನಲ್‌ಗಳು ಹತ್ತಿರ ಇವೆ. ಸುಮಾರು ಒಂದು ಅಥವಾ ಒಂದೂವರೆ ಕಿಲೋಮೀಟರ್ ದೂರದಲ್ಲಿ ಇದೆ. ಅದನ್ನು ನೋಡುವುದಕ್ಕೆ ಸಾಧ್ಯವಿಲ್ಲ. ಅದು ಒಂದು ರೀತಿಯಲ್ಲಿ ನರಕ ಯಾತ್ರೆಯಾಗಿದೆ. ಅಲ್ಲಿರುವಂತಹ ಒಬ್ಬ ಮುಖ್ಯ ಇಂಜಿನಿಯರ್‌ನ್ನು ಬೈಯಬೇಕಾದಂತಹ ಸಂದರ್ಭ ಸಹ ಬಂದಿತ್ತು. ಖಂಡಿತವಾಗಿಯು ಆ ಅಧಿಕಾರಿಗೆ ದೇವರು ಶಾಪವನ್ನು ಹಾಕುತ್ತಾನೆ. ಅಲ್ಲಿರುವಂತಹ ಜನರು ತಮ್ಮ ಮಕ್ಕಳು ಮರಿಗಳನ್ನು ನೆಲ್ಲು ಹುಲ್ಲಿನ ಮೇಲೆ ಹಾಕಿಕೊಂಡು ಜೀವನ

ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಆಲೋಚನೆ ಮಾಡಿ ಆಲ್ಲಿರುವಂತಹ ಜನರನ್ನು ತಾವು ಸ್ಥಳಾಂತರ ಮಾಡಬೇಕೆಂದು ನಾನು ಬೇಕಾದಷ್ಟು ಸಾರಿ ಒತ್ತಾಯ ಮಾಡಿದ್ದೇನೆ. ಆದರೂ ಸಹ ಸರ್ಕಾರದವರು ಏನೇನು ಯೋಚನೆ ಮಾಡಿಲ್ಲ. ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ಹಿಂದಿನ ಮುಖ್ಯ ಕಾರ್ಯದರ್ಶಿಯವರ ಜೊತೆಯಲ್ಲಿ ನಾನು ಚರ್ಚೆ ಮಾಡಿದ್ದೇನೆ. ಮತ್ತು ಈಗ ಇರುವಂತಹ ಮುಖ್ಯಕಾರ್ಯದರ್ಶಿಗಳ ಜೊತೆಯಲ್ಲಿಯೂ ಸಹ ಚರ್ಚೆ ಮಾಡಿ ವಿಷಯವನ್ನು ಅವರ ಗಮನಕ್ಕೆ ತಂದಿದ್ದೇನೆ. ಯಾವ ಯಾವ ಹಳ್ಳಿಗಳನ್ನು ತೆಗೆದುಕೊಳ್ಳಬೇಕು ಎನ್ನುವ ಬಗ್ಗೆಯೂ ಕೂಡ ನಾನು ಹೇಳಿದ್ದೇನೆ. ಆದರೆ ಆಗ ಮೊದಲ ಸುತ್ತಿನಲ್ಲಿ ಸುಮಾರು ೭ ಹಳ್ಳಿಗಳನ್ನು ರೆಕ್‌ಮೆಂಡ್ ಮಾಡಿದ್ದಾರೆ. ಮತ್ತೆ ಮಲಪ್ರಭಾ ಬಾರ್ಡರ್‌ನಲ್ಲಿರುವ ಸುಮಾರು ೨೦೦ ಮನೆಗಳನ್ನು ಸಹ ತೆಗೆದು ಕೊಳ್ಳಬೇಕೆಂದು ನಾನು ಹೇಳಿದ್ದೆ. ಆದರೆ ಆ ಮನೆಗಳನ್ನು ಸಹ ಸ್ಥಳಾಂತರ ಮಾಡಲಿಲ್ಲ. ಅವರು ಆಲ್ಲಿ ನರಕ ಯಾತ್ರೆಯನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಅವರ ನರಕಯಾತ್ರೆಯನ್ನು ಸರ್ಕಾರ ದವರು ತಪ್ಪಿಸಬೇಕಾದರೆ ಸುಮಾರು ೨೫–೩೦ ಲಕ್ಷ ರೂಪಾಯಿಗಳ ವೆಚ್ಚ ಸರ್ಕಾರಕ್ಕೆ ತಗಲಬಹುದು. ದಾಮಾಶಾ ಪ್ರಕಾರ ಲೆಕ್ಕ ಹಾಕಿ ನೋಡಿದರೂ ಕೂಡ ಸುಮಾರು ೨೫–೩೦ ಲಕ್ಷ ರೂಪಾಯಿಗಳಿಗಿಂತ ಮೇಲೆ ಹೋಗುವುದಿಲ್ಲ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ ಇಂತಹ ಒಂದು ಜಟಿಲವಾದಂತಹ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾನು ಹೇಳುತ್ತಾ ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂತಹ ಶ್ರೀಮಾನ್ ದೇವೇಗೌಡರು ಹಳ್ಳಿಗಳ ರೈತರ ಕಷ್ಟಗಳ ಬಗ್ಗೆ ಸವಿವರವಾಗಿ ವಿವರಿಸಿದ್ದಾರೆ. ಆದರೆ ನಾನು ಕೂಡ ತಕ್ಕಂತಹ ಸೂಚನೆ ಏನೆಂದರೆ, ಸುಮಾರು ಹಳ್ಳಿಗಳು ಮುಳಗಡೆಯಾಗಿವೆ. ಈ ರೀತಿ ಮುಳಗಡೆ ಯಾಗಿರುವಂತಹ ಹಳ್ಳಿಗಳ ಅಭಿವೃದ್ಧಿಗಾಗಿ ಸರ್ಕಾರದವರು ತೀವ್ರವಾದಂತಹ ಕಾರ್ಯಕ್ರಮವನ್ನು ತೆಗದುಕೊಳ್ಳಬೇಕು. ನಮ್ಮ ಹಾಸನ ಜಿಲ್ಲೆಯಲ್ಲಿರುವ ಸುಮಾರು ೨೭ ಹಳ್ಳಿಗಳ ಜನರಿಗೆ ಆರಣ್ಯ ಇಲಾಖೆಯವರು ಅವರ ಸ್ಥಿತಿಯ ಬಗ್ಗೆ ಪರಿಶೀಲನೆ ಮಾಡಿ ಅವರಿಗೆ ವಾಸಕ್ಕೆ ಸರಿಯಾದಂತ ವ್ಯವಸ್ಥೆ ಯನ್ನು ಮಾಡಿಕೊಡಬೇಕು. ಈ ಆರಣ್ಯ ಇಲಾಖೆಯವರ ಜೊತೆಗೆ ರೆವಿನ್ಯೂ ಇಲಾಖೆಯವರು ಸಹ ಸಹಕರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಆದಷ್ಟು ಜಾಗ್ರತೆಯಾಗಿ ಪರಿಶೀಲನೆ ಮಾಡಿ ಸುಮಾರು ೨೭ ಹಳ್ಳಿಗಳನ್ನು ಸಹ ಸ್ಥಳಾಂತರ ಮಾಡುವಂತೆ ವ್ಯವಸ್ಥೆ ಮಾಡಬೇಕು. ಸರ್ಕಾರ ದವರು ಈಗ ಸುಮಾರು ೧೭ ಹಳ್ಳಿಗಳನ್ನು ಮಾತ್ರ ಆಯ್ಕೆ ಮಾಡಿಕೊಂಡಿದ್ದಾರೆ. ಆದರೆ ಆ ಜನಗಳಿಗೆ ಸರ್ಕಾರದವರು ಯಾವ ಸೌಲಭ್ಯವನ್ನು ಸಹ ಕಲ್ಪಿಸಿಕೊಟ್ಟಿಲ್ಲ. ಮತ್ತು ೨೫-೯-೧೯೮೧ರಲ್ಲಿ ಮಂತ್ರಿ ಮಂಡಲದ ಸಭೆಯಲ್ಲಿ ೨೭ ಹಳ್ಳಿಗಳನ್ನು ಸ್ಥಳಾಂತರ ಮಾಡುವಂತೆ ಸರ್ಕಾರ ಒಪ್ಪಿಕೊಂಡಿದೆ ಎಂದು ಗೊತ್ತಾಗಿದೆ. ಆದರೆ ಇದುವರೆವಿಗೂ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ, ಸುಮಾರು ೭ ಹಳ್ಳಿ ಗಳ ಪಟ್ಟಿಗೆ ಮಾತ್ರ ಕ್ರಮ ತೆಗೆದುಕೊಂಡಿದ್ದಾರೆ. ಇನ್ನು ಉಳಿದ ಹಳ್ಳಿಗಳ ಬಗ್ಗೆ ಏತಕ್ಕೆ ಸರ್ಕಾರದ ಗಮನ ಹರಿಸಿಲ್ಲವೆಂಬುದು ಗೊತ್ತಾಗಲಿಲ್ಲ. ಈ ಎಲ್ಲಾ ಹಳ್ಳಿಗಳಲ್ಲಿಯೂ ಕೂಡ ಸುತ್ತಲೂ ನೀರು ತುಂಬಿವೆ. ಅವರು ಆಲ್ಲಿ ವಾಸ ಮಾಡುವುದು ಬಹಳ ಕಷ್ಟವಾಗಿದೆ. ಆಲ್ಲಿ ಅವರಿಗೆ ಇರುವಂತಹ ಜಮೀನು ಪೂರ್ತಿಯಾಗಿ ಮುಳುಗಿಹೋಗಿದೆ. ಆದ್ದರಿಂದ ಈ ೨೭ ಹಳ್ಳಿಗಳಿಗೂ ಸರ್ಕಾರದವರು ಸಹಾಯ ಮಾಡಿ ಅವರನ್ನು ಅಭಿವೃದ್ಧಿ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿ ಕೊಂಡು ಮತ್ತೆ ಆ ಬಗ್ಗೆ ಎಲ್ಲಾ ಅಧಿಕಾರಿಗಳಿಗೂ ಒಂದು ಆದೇಶವನ್ನು ಹೊರಡಿಸುತ್ತಾರೆಂದು ತಿಳಿದು ಕೊಂಡಿದ್ದೇನೆ.

ಶ್ರೀ ಸೋಮಪ್ಪ.—ಮಾನ್ಯ ಅಧ್ಯಕ್ಷರೇ ಆಲ್ಲಿ ಸುಮಾರು ಹಳ್ಳಿಗಳು ನೀರು ಪಾಲಾಗಿವೆ. ಆಲ್ಲಿ ಮಲೆನಾಡು ಪ್ರದೇಶವಾದ್ದರಿಂದ ಆಲ್ಲಿ ವಿಪರೀತವಾಗಿ ಮಳೆ ಬರುತ್ತದೆ. ಆಲ್ಲಿ ಸುಮಾರು ೪ ದಿವಸ ಗಳಿಂದ ಪರಿಸ್ಥಿತಿ ಬಹಳ ಹದಗೆಟ್ಟಿದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಆ ೨೭ ಹಳ್ಳಿ ಗಳನ್ನು ಸರ್ಕಾರದವರು ಕೂಡಲೇ ಸ್ಥಳಾಂತರ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—(ಮಾನ್ಯ ಸಣ್ಣ ನೀರಾವರಿ ರಾಜ್ಯಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮುಖ್ಯವಾಗಿ ಎರಡು ಸಮಸ್ಯೆಗಳು ಇವೆ. ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ದೇವೇಗೌಡರು ಹೇಳಿದಂತಹ ಒಂದು ಸಮಸ್ಯೆ ಮತ್ತೆ ನಮ್ಮ ಮಾನ್ಯ ಸದಸ್ಯರಾದಂತಹ ರಾಮಸ್ವಾಮಿಯವರು ಹೇಳಿದಂತದ್ದು ಒಂದು ಸಮಸ್ಯೆ. ಇದರಲ್ಲಿ ಸುಮಾರು ಜನ ರೈತರಿಗೆ ತೊಂದರೆ

ಯಾಗಿದೆ ಮತ್ತು ಅವರು ಕಷ್ಟದಲ್ಲಿದ್ದಾರೆ ಎನ್ನುವ ಮಾತನ್ನೆ ಮಾನ್ಯ ಸದಸ್ಯರು ಇಬ್ಬರು ಪ್ರಸ್ತಾಪ ಮಾಡಿದ್ದಾರೆ. ಆದರೆ ಸರ್ಕಾರದವರು ಇದನ್ನು ಗಮನದಲ್ಲಿಟ್ಟುಕೊಂಡು ಸುಮಾರು ಸೂಕ್ತವಾದಂತಹ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಸುಮಾರು ೪೬ ಹಳ್ಳಿಗಳು ಮುಳಗಡೆ ಹೊಂದಿದ್ದವು. ಇದರಲ್ಲಿ ಸುಮಾರು ೪೩ ಹಳ್ಳಿಗಳನ್ನು ನಾವು ಷಿಫ್ಟ್ ಮಾಡಿದ್ದೇವೆ. ಮತ್ತೆ ಮಾನ್ಯ ಸದಸ್ಯರು ಹೇಳಿದ ೨೭ ಹಳ್ಳಿಗಳಲ್ಲಿ ಸುಮಾರು ೭ ಹಳ್ಳಿಗಳನ್ನು ಷಿಫ್ಟ್ ಮಾಡುವುದಕ್ಕಾಗಿ ಸರ್ಕಾರದಿಂದ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಮತ್ತೆ ೫ ಹಳ್ಳಿಗಳನ್ನು ತೆಗೆದುಕೊಳ್ಳುವಂತೆ ಸರ್ಕಾರದವರು/ಮಂಜೂರಾತಿಯನ್ನ ಕೊಟ್ಟಿದ್ದೇವೆ. ಒಟ್ಟು ಸುಮಾರು ೧೨ ಹಳ್ಳಿಗಳಿಗೆ ನಾವು ಮಂಜೂರಾತಿಯನ್ನು ಕೊಟ್ಟಿದ್ದೇವೆ. ಇನ್ನೂ ಇರುವಂತಹ ಹಳ್ಳಿಗಳಿಗೂ ಕೂಡ ಸರ್ಕಾರ ಮಂಜೂರಾತಿ ಕೊಡಬೇಕು ಎನ್ನುವ ಉದ್ದೇಶವನ್ನು ಹೊಂದಿದೆ. ಎಲ್ಲಾ ಹಳ್ಳಿಗಳನ್ನು ಸ್ಥಳಾಂತರ ಮಾಡಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದೆ.

ಅವರೂ ಸಹ ತ್ವರಿತಗತಿಯಿಂದ ಈ ಹಳ್ಳಿಗಳಿಗೆ ತೊಂದರೆ ಇರತಕ್ಕಂಥಾದ್ದನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಈ ಹಳ್ಳಿಗಳನ್ನೂ ಕೂಡ ಸರ್ವವಿಧದಲ್ಲಿ ಸ್ಥಳಾಂತರ ಮಾಡುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ. ಮಾನ್ಯ ದೇವೇಗೌಡರು ಮತ್ತೊಂದು ಮಾತು ಹೇಳಿ Command Area ದಲ್ಲಿರತಕ್ಕಂಥ ಹಳ್ಳಿಗಳನ್ನು ಈಗಾಗಲೇ Rehabilation Committee ಯವರು, ಆದರಲ್ಲೂ ಮುಖ್ಯವಾಗಿ Chief Engineer and Supdt. Engineer ಅವರು personal inspection ಮಾಡಿ ಸುಮಾರು ಏಳು ಹಳ್ಳಿಗಳನ್ನು ಶಿಫಾರಸ್ಸು ಮಾಡಿದ್ದಾರೆ. ಸ್ಥಳಾಂತರ ಮಾಡುವುದಕ್ಕೆ ಸುಮಾರು ೫೮ ಲಕ್ಷ ರೂಪಾಯಿಗಳು ಖರ್ಚಾಗಬಹುದೆಂದು ಅಂದಾಜು ಮಾಡಿದ್ದಾರೆ. ಮತ್ತೆ ಬೇರೆ ಕೆಲವು ಸಲಹೆಗಳನ್ನೂ ಕೂಡ ಕೊಟ್ಟಿದ್ದಾರೆ. ಒಂದು ಸಮಸ್ಯೆ ಏನು ಬರುತ್ತದೆ ಎಂದರೆ ಈಗ ಸರ್ಕಾರದ ನೀತಿ ನಿಯಮಗಳಿಗೆ ಅನುಸಾರವಾಗಿ Command Area ದಲ್ಲಿ ಇರತಕ್ಕಂಥ ಹಳ್ಳಿಗಳನ್ನು ಯಾವುದನ್ನೂ ಶಿಫ್ಟ್ ಮಾಡುವಂತಿಲ್ಲ. ಕೇವಲ ಹೇಮಾವತಿ ಪ್ರಾಜೆಕ್ಟ್‌ನಲ್ಲಿ, ಅಷ್ಟೇ ಅಲ್ಲ ವಿಶೇಷವಾಗಿ ತುಂಗಭದ್ರಾ ಕಾಲುವೆಗಳಲ್ಲಿ, ಮಲಪ್ರಭಾ ಯೋಜನೆಯಲ್ಲಿ ಬರತಕ್ಕಂಥ ಅನೇಕ ಹಳ್ಳಿಗಳಲ್ಲಿ ಕೂಡ ಅದೇ ಪರಿಸ್ಥಿತಿ ಇರಬಹುದು, ಇದು ಪಾಲಿಸಿ ಮ್ಯಾಟರ್ ಇರುವುದರಿಂದ ಇದನ್ನೂ ಕೂಡ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಸಮಗ್ರವಾಗಿ ನಾನು ಚರ್ಚೆ ಮಾಡುತ್ತೇನೆ. ಏಕೆಂದರೆ ಇದನ್ನು ಒಂದು ಪ್ರಾಜೆಕ್ಟ್‌ನಲ್ಲಿ apply ಮಾಡಿದ ಮೇಲೆ ಎಲ್ಲಾ ಪ್ರಾಜೆಕ್ಟ್‌ಗಳಿಗೂ ಅನ್ವಯಿಸಿ ಹಳ್ಳಿಗಳನ್ನು ಸ್ಥಳಾಂತರಿಸಬೇಕಾಗಿ ಬರುತ್ತದೆ. ಹೇಮಾವತಿಯಲ್ಲಿ ಒಂದೇ ಆಲ್ಲವಾದ್ದರಿಂದ ಇದು ಬಹಳ ಜಟಿಲವಾದ ಸಮಸ್ಯೆಯಾಗಿರುವುದರಿಂದ ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಚರ್ಚೆಮಾಡುತ್ತೇನೆ. ಆದರೆ ಸಧ್ಯಕ್ಕೆ ತಮಗೆ ಹೇಳುವುದಾದರೆ joint inspection ಮಾಡಿ Chief Engineer ಮತ್ತು ಬೇರೆ ವ್ಯವಸಾಯ ಅಧಿಕಾರಿಗಳು ಕೇಳಿಕೊಂಡಿರುವುದು ಸಿಂಗಲ್ ಕ್ರಾಪ್, ಆದರೆ ಅಲ್ಲಿ ಬೆಳೆಸಿರುವುದು ಡಬಲ್ ಕ್ರಾಪ್. ಅವರು ಸಿಂಗಲ್ ಕ್ರಾಪ್ ಬೆಳೆಯುವುದಕ್ಕೆ ಬಹುಶಃ Water logging ಪ್ರಶ್ನೆ ಬರಲಾರದು. ಆದ್ದರಿಂದ joint inspection ಮಾಡಿ ತಾತ್ಕಾಲಿಕವಾಗಿ ಏನೇನು ವ್ಯವಸ್ಥೆಗಳನ್ನು ಮಾಡುವುದಕ್ಕೆ ಆಗುತ್ತದೆ, ಅದರ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಒಬ್ಬರು ಮಾನ್ಯ ಸದಸ್ಯರು.—ಮುಳುಗಡೆ ಪ್ರದೇಶದಲ್ಲಿ ಮಳೆ ಶುರುವಾಗಿದೆ. ಅಲ್ಲಿ ವಾಸ ಮಾಡುವುದಕ್ಕೆ ಸಾಧ್ಯವಿಲ್ಲದಂತಹ ಪರಿಸ್ಥಿತಿ ಇದೆ. ಆದ್ದರಿಂದ ಇದನ್ನು ಇನ್ನೆಷ್ಟು ದಿವಸಗಳಲ್ಲಿ ಕೊಡುತ್ತಾರೆಂದೂ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಆದಷ್ಟು ಪ್ರಯತ್ನ ಮಾಡಿ ಬೇಗ ಮುಗಿಸಿ ಕೊಡುತ್ತೇವೆ.

ಶ್ರೀ ಎಚ್.ಡಿ. ದೇವೇಗೌಡ —ನನ್ನ ಪ್ರಶ್ನೆಯನ್ನು ಮಾನ್ಯ ಸಚಿವರು ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಹೇಮಾವತಿಯಲ್ಲಿ ರೈಟ್ ಬ್ಯಾಂಕ್ ಚಾನಲ್‌ನಲ್ಲಿ paddy cultivation ಮಾಡಲು ಅವರು cropping patternಗೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಹೇಮಾವತಿ ರೈಟ್ ಬ್ಯಾಂಕ್ ಚಾನಲ್‌ನಲ್ಲಿ ಪ್ಯಾಡಿ ಕಲ್ಟಿವೇಶನ್‌ಗೆ ಸುಮಾರು ಎಂಟು ಸಾವಿರ ಎಕರೆಯನ್ನು ಹೊಳೆನರಸೀಪುರ ತಾಲ್ಲೂಕಿನಲ್ಲಿ ಅವಕಾಶ ಕೊಟ್ಟಿದ್ದು, ಅದೇನೂ ಡ್ರೈ ಲ್ಯಾಂಡ್ ಅಲ್ಲ. ಇವತ್ತು ಮಾನ್ಯ ಸಚಿವರು ಅಲ್ಲಿ ಡ್ರೈ ಕಲ್ಟಿವೇಶನ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಡ್ರೈ ಕಲ್ಟಿವೇಶನ್

ಮಾಡುವುದಕ್ಕೆ ಯಾವ ಪಾಲಿಸಿ ಇದೆ? ಇಡೀ ಕರ್ನಾಟಕದಲ್ಲಿರತಕ್ಕಂಥ ಅಪ್ಪರ್ ಕೃಷ್ಣ, ಮಲಪ್ರಭಾ ಗಳಲ್ಲಿ ಈ ಪಾಲಿಸಿ ಪ್ರಕಾರ ಡ್ರೈ ಕಲ್ಟಿವೇಶನ್ ಮಾಡುವುದಕ್ಕೆ ಬರುವುದಿಲ್ಲವಾಗಿರುವಾಗ ಇನ್ನು ಅಲ್ಲಿ ಮಾತ್ರ ಇದನ್ನು ಮಾಡಲು ಹೋಗಿ ಇನ್ನೆಷ್ಟು ದುಡ್ಡು ಹೂಡಿಯಬೇಕೋ?

ಶ್ರೀ ಬಿ ಬಿ. ಚಿಮ್ಮನಕಟ್ಟಿ.—ನಾನು ಹೇಳಿದ್ದು ಡ್ರೈ ಕಲ್ಟಿವೇಶನ್ ಮಾಡುವುದಕ್ಕೆ ಪಾಲಿಸಿ ಮ್ಯಾಟರ್ ಅಲ್ಲ. ಷಿಫ್ಟ್ ಮಾಡುವುದಕ್ಕೆ ಪಾಲಿಸಿ ಮ್ಯಾಟರ್ ಇದೆ ಅಂತ ನಾನು ಹೇಳಿದ್ದು.

ಶ್ರೀ ಎಚ್.ಡಿ. ದೇವೇಗೌಡ.—ಸ್ವಲ್ಪವಾದರೂ ಇದರ ಬಗ್ಗೆ ಗಮನಿಸಬೇಕಾಗುತ್ತದೆ. ಫೈಲನ್ನು ತರಿಸಿಕೊಂಡು ನೋಡಬೇಕು ಹಿಂದೊಂದು ಕಡೆಯಲ್ಲೂ ನಾಲ್ಕೈದು ಲಕ್ಷ ರೂಪಾಯಿಗಳಲ್ಲಿ ಡ್ರೈ ಕಲ್ಟಿವೇಶನ್ ಮಾಡುತ್ತೇವೆ ಅಂತ ಹೇಳಿದ್ದು ಎಷ್ಟು ದೂರಕ್ಕೆ ಹೋಗಿದೆ? ಅಲ್ಲಿಗೆ ಮಾನ್ಯ ಮುಖ್ಯ ಮಂತ್ರಿಗಳು ಹೆಲಿಕ್ಯಾಪ್ಟರ್‌ನಲ್ಲಿ ಹೋಗಿ ನೋಡಿಕೊಂಡು ಬರಬೇಕು. ನಾವು ಅಲ್ಲಿ ಹೋಗಿ ನೋಡುಲಿಕ್ಕೆ ಆಗುವುದಿಲ್ಲ. ಡ್ರೈ ಕಮ್ ವೆಟ್ ಲ್ಯಾಂಡ್ ಪ್ರಶ್ನೆ ಬೇಡ. ವೆಟ್‌ಲ್ಯಾಂಡ್ ಪ್ರದೇಶದಲ್ಲಿ ಏನು ಪರಿಸ್ಥಿತಿ ಇದೆ? ಅಲ್ಲಿ ಏನಾಗಿದೆ ಎಂದರೆ ಆದ ಹಳ್ಳಿಗಳನ್ನು ಷಿಫ್ಟ್ ಮಾಡಬೇಕೆಂದು ಹೇಳಿ ರಿಹೇಬಲಿಟೇಷನ್ ಕಮಿಟಿಯವರು ಏನು ಪ್ರಪೋಸ್ ಮಾಡಿದ್ದರೋ, ಅದರ ಪ್ರಕಾರವಾಗಿ ಮಾನ್ಯ ಮಂತ್ರಿಗಳು ತೀರ್ಮಾನ ತೆಗೆದುಕೊಳ್ಳದೇ ಹೋದ ಪರಿಣಾಮವಾಗಿ ಈ ಲ್ಯಾಂಡನ್ನು ಡಿಸ್‌ಪೋಸ್ ಮಾಡಬೇಕೆಂದು ಸರ್ಕಾರ ನಿರ್ಣಯ ಕೊಟ್ಟು ಜೂನ್ ೩೦ ರೊಳಗೆ ಅವೈಲೇಬಲ್ ಲ್ಯಾಂಡ್ ಕೊಡಬೇಕೆಂದು ಹೇಳಿ ಆ ಜಮೀನನ್ನು ದರಖಾಸ್ತಿನ ಬೆಲೆಗೆ ಕೊಡುತ್ತಿದ್ದಾರೆ. ಎಲ್ಲಿ ಅಲ್ಲಿ ಪ್ರಪೋಸ್ಡ್ ಷಿಫ್ಟಿಂಗ್‌ಗೆ ಸೈಟನ್ನು ಇಟ್ಟುಕೊಳ್ಳಬೇಕೆಂದು ಏನು ಅಭಿಪ್ರಾಯ ಇದೆಯೋ, ಸರ್ಕಾರ ನಿರ್ಣಯ ತೆಗೆದುಕೊಳ್ಳಲಿಲ್ಲವೆಂದು ಹೇಳಿ ಅಲ್ಲಿ ಪುನರ್‌ವಸತಿ ಮಾಡುವುದಕ್ಕೆ ಎತ್ತರವಾದ ಜಾಗವಿಲ್ಲವೆಂದು ಹೇಳಿ ಆ ಎಲ್ಲಾ ಜಾಗವನ್ನು ದರಖಾಸ್ತಿನಲ್ಲಿ ಹಂಚುತ್ತಿದ್ದಾರೆ. ಅಲ್ಲಿ ಶಿಫ್ಟ್ ಮಾಡಲಿಕ್ಕೆ ನಿರ್ಧಾರ ತೆಗೆದುಕೊಂಡಮೇಲೆ ಅವರಿಗೆ ಲಕ್ಷಾಂತರ ರೂಪಾಯಿಗಳು ಕೊಡಬೇಕು ಬುದ್ಧಿ ಇದೆಯಾ ಸರ್ಕಾರದ ಅಧಿಕಾರಿಗಳಿಗೆ? ಡಿ.ಸಿ.ಗಳಿಗೆ ಅಧಿಕಾರಿಗಳಿಗೆ ಮೂರು ನಾಲ್ಕು ಸಾವಿರ ರೂಪಾಯಿಗಳ ಸಂಬಳ ಕೊಡುತ್ತಿದ್ದಾರೆ. ಸರ್ಕಾರಕ್ಕೆ ಸ್ವಲ್ಪವಾದರೂ ಪ್ರಜ್ಞೆ ಬೇಡವೆ? ಒಂದು ಕಡೆ ದರಖಾಸ್ತಿನಲ್ಲಿ ಜಮೀನನ್ನು ಹಂಚುತ್ತಿದ್ದಾರೆ. ಇನ್ನೊಂದು ಕಡೆ ತೆಗೆದುಕೊಂಡಿರುವುದಕ್ಕೆ ಕಾಂಪನ್‌ಸೇಷನ್ ಕೊಡುತ್ತಾರೆ. ಮೈಸೂರು ಡಿವಿಜನ್‌ನಲ್ಲಿ ಕ್ಯಾಬಿನೆಟ್ ಮೀಟಿಂಗ್ ನಡೆದಾಗ Chief Secretary ಮತ್ತು Addl. Chief Secretary ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದವರು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಉತ್ತರ ಕೊಡುತ್ತಾರೆಯೇ?

SRI R. GUNDU RAO.—What to do, human problems.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ನೀವೇ ನಮ್ಮ ರಕ್ಷಣೆಗೆ ಬರಬೇಕು. ಅಲ್ಲಿ ಮನೆಗಳೊಳಗೆ ನೀರು ನಿಂತಿದೆ. ನಾವು ಏನು ಮಾಡಬೇಕು? ಹೆಲಿಕ್ಯಾಪ್ಟರ್ ಇದೆಯಲ್ಲ ಅದಕ್ಕಾಗಿ ಖರ್ಚಾದರೂ ಚಿಂತೆ ಇಲ್ಲ. ನೋಡಿಕೊಂಡು ಬಂದು ಒಂದು ನಿರ್ಣಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡುತ್ತಾರೆಯೇ?

SRI R. GUNDU RAO.—I will go personally and see that a decision is taken.

(ii) reg: Abuse of power and petition by the Land Tribunal Members.

ಶ್ರೀ ಕೆ.ಎಂ. ತಮ್ಮಯ್ಯ (ಕಡೂರು).—ಮಾನ್ಯ ಅಧ್ಯರೇ, ನಮ್ಮಲ್ಲಿ ಎಮ್ಮೆದೊಡ್ಡಿ ಅರೆಂಜ್ ಎಸ್ಟೇಟ್ ಇದ್ದು ಅಲ್ಲಿ ಸರ್‌ಪ್ಲಸ್ ಲ್ಯಾಂಡ್ ಬಹಳ ಇದೆಯೆಂದು ಹೇಳಿ ಆಗಿನ ಅಧಿಕಾರಿಗಳು ಮಂತ್ರಿ ಟ್ರಿಬ್ಯುನಲ್ ಮೆಂಬರುಗಳು ಅಲ್ಲಿಯ ಜನಗಳಿಗೆ ನಿಮಗೆ ಕೆಲವು ಭಾಗವನ್ನು ಕೊಟ್ಟರೆ ನಮಗೆಷ್ಟು ಕೊಡುತ್ತೀರಿ ಎಂದು ಹೇಳಿ ಸೈಟ್‌ನ್ನು ತೆಗೆದುಕೊಂಡು ಬಡವರಿಗೆ ಹಂಚದೇನೇ ಅವರವರೇ ಹಂಚಿಕೊಂಡು ಉಳಿದ ಅಲ್ಪಸ್ವಲ್ಪ ಭಾಗವನ್ನು ಮಾತ್ರ ಅವರಿಗೆ ಹಂಚಿದ್ದಾರೆ. ನಾನು ಅನೇಕ ಸಾರಿ ಜಿಲ್ಲಾಧಿಕಾರಿಗಳನ್ನು ಮತ್ತು ಸಂಬಂಧಪಟ್ಟ ಇತರ ಅಧಿಕಾರಿಗಳನ್ನು ಕೇಳಿಕೊಂಡಿದ್ದೇನೆ. ಸುಮಾರು ಎರಡು ಮೂರು ವರ್ಷಗಳಿಂದಲೂ ಇದರ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಇದರಿಂದ ಏನಾಗಿದೆ